ವ್ಯವಸ್ಥೆಯನ್ನು ಮಾಡುತ್ತೀರೆನ್ನುವ ಒಂದು ಉತ್ತರವನ್ನು ಸಚಿವರು ಕೊಡಬೇಕು.

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ಇಡೀ ರಾಜ್ಯದಲ್ಲಿ ಈ ಪ್ರೌಢಶಾಲೆಗಳ ಕಟ್ಟಡಗಳ ಅವಶ್ಯಕತೆ ತುಂಬಾ ಇದೆ. ಮೊದಲು ಎಲ್ಲಿ ಇದರ ಅವಶ್ಯಕತೆ ಹೆಚ್ಚಾಗಿದೆ ಅಲ್ಲಿ ಅದನ್ನು ಈ ವರ್ಷವೇ ಕಟ್ಟಿಸುವುದಕ್ಕೆ ಪ್ರಯತ್ನಪಡುತ್ತೇವೆ. 7 ಶಾಲೆಗಳ ಕಟ್ಟಡದ ಬಗ್ಗೆ ತಮಗೆ ಖಚಿತವಾದಂತ ಅಭಿಪ್ರಾಯವನ್ನು ಹೇಳುವುದಿಲ್ಲ. ಅಲ್ಲಿಂದ ವರದಿಯನ್ನು ತರಿಸಿಕೊಂಡು ಈ ವರ್ಷ ಅದರ ಅವಶ್ಯಕತೆ ಇದೆ ಎಂದು ಕಂಡುಬಂದರೆ ಖಂಡಿತ ಈ ವರ್ಷವೇ ಒಂದನ್ನಾದರು ಕಟ್ಟಿಸಿಕೊಡುವುದಕ್ಕೆ ಪ್ರಯತ್ನಪಡುತ್ತೇವೆ, ಇಲ್ಲದಿದ್ದರೆ ಹಂತ ಹಂತವಾಗಿ ಪ್ರೌಢಶಾಲೆಗಳ ಕಟ್ಟಡಗಳನ್ನು ಕಟ್ಟಿಸುವಂಥ ಯೋಜನೆಯನ್ನು ಈ ವರ್ಷ ನಾವು ಜಾರಿಗೆ ತಂದಿದ್ದೇವೆ. ಇದನ್ನು ಬರುವ ವರ್ಷ ಕಟ್ಟಿಸುವಂಥ ವ್ಯವಸ್ಥೆಯನ್ನು ಮಾಡುತ್ತೇವೆ.

ಶ್ರೀ ಚಂದ್ರಕಾಂತ ಗುರಪ್ಪ ಬೆಲ್ಲದ:- ಸನ್ಮಾನ್ಯ ಅಧ್ಯಕ್ಷರೆ, ನಾನು ಶಿಕ್ಷಣ ಮಂತ್ರಿಗಳನ್ನು ಕೇಳುತ್ತಿರುವುದೇನೆಂದರೆ, ಧಾರವಾಡ ಒಂದು ಶೈಕ್ಷಣಿಕ ಕೇಂದ್ರವೆನ್ನುವುದು ಎಲ್ಲರಿಗೂ ಗೊತ್ತಿರುವ ವಿಚಾರ. ಈ ಧಾರವಾಡದಲ್ಲಿ ಒಂದೂ ಕೂಡ ಸರ್ಕಾರಿ ಪ್ರೌಢ ಶಾಲೆಯಿಲ್ಲ. ಅನೇಕ ವರ್ಷಗಳಿಂದ ಅಲ್ಲಿಗೆ ಸರ್ಕಾರಿ ಪ್ರೌಢ ಶಾಲೆಗಳು ಬೇಕೆನ್ನುವಂಥ ಬೇಡಿಕೆ ಇದೆ. ಅಲ್ಲಿರುವಂತ ಎಲ್ಲಾ ಪ್ರೌಢ ಶಾಲೆಗಳು ಖಾಸಗಿಯವಾಗಿರುವುದರಿಂದ ಬಡ ಮಕ್ಕಳು ಅಲ್ಲಿ ಓದುವುದಕ್ಕೆ ಪ್ರವೇಶ ಸಿಗುತ್ತಿಲ್ಲ. ಅಲ್ಲಿ ಎಲ್ಲರು ವಂತಿಗೆಯನ್ನು ನೀಡಿ ಶಾಲೆಗಳಿಗೆ ಪ್ರವೇಶ ಪಡೆಯುತ್ತಿದ್ದಾರೆ. ಈಗ ನೀವು ಸರ್ಕಾರಿ ಪ್ರೌಢಶಾಲೆಗಳನ್ನು ಈ ವರ್ಷ ಪ್ರಾರಂಭ ಮಾಡುತ್ತಾ ಇಲ್ಲ ಎಂದು ಹೇಳುತ್ತಿದ್ದೀರಿ, ಮುಂದಿನ ವರ್ಷದಿಂದ ಎಷ್ಟು ಪ್ರೌಢ ಶಾಲೆಗಳನ್ನು ಧಾರವಾಡದಲ್ಲಿ ಪ್ರಾರಂಭ ಮಾಡುತ್ತಿದ್ದೀರಿ, ಅದನ್ನು ತಾವು ದಯಮಾಡಿ ತಿಳಿಸುವಿರಾ?

ಶ್ರೀ ಹೆಚ್.ಜಿ.ಗೋವಿಂದೇಗೌಡ:- ಮಾನ್ಯ ಅಧ್ಯಕ್ಷರೆ, ಅವರು ಎಷ್ಟು ಶಾಲೆಗಳನ್ನು ಪ್ರಾರಂಭ ಮಾಡುತ್ತೀರಾ ಎಂದು ಕೇಳುವುದನ್ನು ನೋಡಿದರೆ ನನಗೆ ಗಾಭರಿಯಾಗುತ್ತದೆ. ಅಲ್ಲಿಗೆ ಒಂದು ಶಾಲೆ ಅವಶ್ಯಕತೆ ಇದೆ ಎಂದು ಕಂಡು ಬಂದರೆ ಅದನ್ನು ಮಾಡಲೇಬೇಕಾಗುತ್ತದೆ. ಅದನ್ನು ನಾವು ಮಾಡುತ್ತೇವೆ.

ಶ್ರೀ ಹೆಚ್.ಡಿ.ಬಸವರಾಜು:- ಮಾನ್ಯ ಅಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ವಿದ್ಯಾಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತಿರುವುದೇನೆಂದರೆ, ಈ ಸಲ ನಡೆದಂತಹ ವರ್ಗಾವಣೆಯಲ್ಲಿ ಖೊಟ್ಟಿ ವರ್ಗಾವಣೆಗಳು ನಡೆದಿವೆ. ಅದು ಹುಕ್ಕೇರಿ ತಾಲ್ಲೂಕಿನಲ್ಲಿ ಮತ್ತು ಖಾನಾಪುರ ತಾಲ್ಲೂಕಿನಲ್ಲಿ ನಡೆದಿದೆ. ಅದಕ್ಕೆ ಸಂಬಂಧಪಟ್ಟ ಮಾಹಿತಿಯನ್ನು ತಮ್ಮ ಬಳಿಗೆ ನಾನು ಕಳುಹಿಸುತ್ತಿದ್ದೇನೆ, ಇದರ ಬಗ್ಗೆ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಶಿಕ್ಷಿಸಬೇಕು ಮತ್ತು ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕೆಂದು ಮಾತ್ರ ನಾನು ಈ ಸಂದರ್ಭದಲ್ಲಿ ಮನವಿ ಮಾಡಿಕೊಳ್ಳುತ್ತೇನೆ.

ಅಧ್ಯಕ್ಷರು:- ಆಗಬಹುದು, ಮಾಹಿತಿಯನ್ನು ಕಳುಹಿಸಿಕೊಡಿ ಕ್ರಮ ತೆಗೆದುಕೊಳ್ಳುತ್ತಾರೆ.

ವಿಷಯ:- ಮೈಸೂರು ಕೆ.ಆರ್.ಆಸ್ಪತ್ರೆ ಅಭಿವೃದ್ಧಿ

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ 238 (2011)

ಶ್ರೀ ಎ.ರಾಮದಾಸ್(ಕೃಷ್ಣರಾಜ):- ಮಾನ್ಯ ವೈದ್ಯಕೀಯ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ,

ಅ) ಮೈಸೂರು ನಗರದ ಕೆ.ಆರ್.ಆಸ್ಪತ್ರೆಯ ಅಭಿವೃದ್ಧಿಗೆ ತುರ್ತಾಗಿ ಆಗಬೇಕಾದ ಕೆಲಸಗಳ ಬಗ್ಗೆ ಸರ್ಕಾರಕ್ಕೆ ಕೋರಿಕೆ ಬಂದಿದೆಯೇ?

ಆ) ಈ ಕೋರಿಕೆಯಲ್ಲಿ ತಿಳಿಸಿರುವ ಮೊತ್ತ ಎಷ್ಟು?

ಇ) ಈ ಕೋರಿಕೆಯ ಬಗ್ಗೆ ಸರ್ಕಾರದ ಕ್ರಮವೇನು? ಪ್ರಸ್ತುತ ಎಷ್ಟು ಮೊತ್ತವನ್ನು ತುರ್ತು ಕಾರ್ಯಕ್ಕೆ ಬಿಡುಗಡೆ ಮಾಡಲಾಗಿದೆ.

ಈ) ಆಸ್ಪತ್ರೆಯ ಮೇಲಿರುವ ದೂರುಗಳ ನಿವಾರಣೆಗೆ: ಕೈಗೊಂಡ ಸರ್ಕಾರದ ಕ್ರಮಗಳೇನು?

ಅ) ಹೌದು -

ಆ) ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಅನುದಾನ ಬಿಡುಗಡೆ ಮಾಡಲು ಕೋರಿಕೆ ಬಂದಿದೆ.

ಇ) 1994-95 ರಲ್ಲಿ ರೂ.28.00 ಲಕ್ಷಗಳ ಮೊತ್ತದ ವಿವಿಧ ಉಪಕರಣಗಳನ್ನು ಮತ್ತು ವಿವಿಧ ಪೀಠೋಪಕರಣಗಳನ್ನು ಸರಬರಾಜು ಮಾಡಲಾಗಿದೆ.

1994-95ನೇ ಸಾಲಿನಲ್ಲಿ ರೂ.1,09,52,147-00 ಮೌಲ್ಯದ ಅತ್ಯಾಧುನಿಕ ಉಪಕರಣಗಳನ್ನು ಆಸ್ಪತ್ರೆ ಅಭಿವೃದ್ಧಿಗಾಗಿ ಸರಬರಾಜು ಮಾಡಲಾಗಿದೆ.

1994-95 ನೇ ಸಾಲಿನಲ್ಲಿ ರೂ.42.50 ಲಕ್ಷ ಅನುದಾನವನ್ನು ಕಟ್ಟಡ ಕಾಮಗಾರಿಗಳಿಗೆ ಒದಗಿಸಲಾಗಿದೆ. ಕಟ್ಟಡಗಳ ದುರಸ್ಥಿಗೆ ಹಾಗೂ ಅಭಿವೃದ್ಧಿಗೆ ಪ್ರತ್ಯೇಕವಾಗಿ ರೂ. 8.00 ಲಕ್ಷಗಳ ಅನುದಾನವನ್ನು ನೀಡಲಾಗಿದೆ.

ಮೈಸೂರು ನಗರದ ಕೆ.ಆರ್.ಆಸ್ಪತ್ರೆಯ ಅಭಿವೃದ್ಧಿಗೆ ತುರ್ತಾಗಿ ಆಗಬೇಕಾದ ಕೆಲಸಗಳು ಕೆಳಗಿನಂತಿದ್ದು ಇದಕ್ಕಾಗಿ 1995-96 ನೇ ಸಾಲಿನ ಆಯವ್ಯಯದಲ್ಲಿ ಈ ಕೆಳಕಂಡಂತೆ ಹಣ ಒದಗಿಸಿಕೊಳ್ಳಲಾಗಿದೆ.

1)ಹೊರ ರೋಗಿಗಳ ವಿಭಾಗದ ಕಟ್ಟಡದ ಕೆಲಸಗಳಿಗಾಗಿ. ರೂ. 1.00 ಲಕ್ಷ

2)ಸುಟ್ಟಗಾಯಗಳ ವಿಭಾಗದ ಕಟ್ಟಡದ ನಿರ್ಮಾಣಕ್ಕಾಗಿ ರೂ. 15.00 ಲಕ್ಷ

3)ಹಾಲಿ ಇರುವ ಶಸ್ತ್ರ ಚಿಕಿತ್ಸೆ ಕೊಠಡಿ ಹೆಚ್ಚುವರಿ ಸೌಲಭ್ಯಕ್ಕಾಗಿ ರೂ. 1.00 ಲಕ್ಷ

4)ಕ್ಷಕಿರಣ ಘಟಕಕ್ಕೆ ವಿಶೇಷ ವಿಭಾಗವನ್ನು ನಿರ್ಮಿಸುವ ಸಲುವಾಗಿ ರೂ. 3.50 ಲಕ್ಷ

5)ಹೊರ ರೋಗಿಗಳ ವಿಭಾಗದ ಕಟ್ಟಡಕ್ಕಾಗಿ ರೂ. 20.00 ಲಕ್ಷ

1995-96 ನೇ ಸಾಲಿನಲ್ಲಿ ಮೇಲ್ಕಂಡ ಕಟ್ಟಡಗಳ ಕಾಮಗಾರಿಕೆಗಳ ಅಭಿವೃದ್ಧಿಗಾಗಿ ಒಟ್ಟು ಮೊತ್ತ ರೂ. 40.50 ಲಕ್ಷಗಳನ್ನು ನಿಗದಿಪಡಿಸಿದ್ದು, ಕಟ್ಟಡ ದುರಸ್ಥಿಗಾಗಿ ರೂ. 3.09 ಲಕ್ಷಗಳ ಅನುದಾನವನ್ನು ಈಗಾಗಲೇ ಬಿಡುಗಡೆ ಮಾಡಿದೆ. ಇನ್ನೂ ಹೆಚ್ಚುವರಿ ರೂ. 10.00 ಲಕ್ಷಗಳ ಅನುದಾನವನ್ನು ಇಲ್ಲಿನ ಕಟ್ಟಡದ ಅಭಿವೃದ್ಧಿಗಾಗಿ ಬಿಡುಗಡೆ ಮಾಡಲಾಗುವುದು.

ಶ್ರೀ ಎ.ರಾಮದಾಸ್:- ಸನ್ಮಾನ್ಯ ಅಧ್ಯಕ್ಷರೆ, ನಾವು ಇಲ್ಲಿ ಕೆ.ಆರ್.ಆಸ್ಪತ್ರೆಗೆ ತುರ್ತಾಗಿ ಆಗಬೇಕಾದಂಥ ಕೆಲಸಗಳು ಏನು ಎಂಬುದರ ಬಗ್ಗೆ ಕೇಳಿದ್ದೇವೆ. ಜೊತೆಗೆ ಅದಕ್ಕೆ ಬೇಕಾದಂಥ ಮೊತ್ತ ಎಷ್ಟು ಎಂಬುದನ್ನು ಕೇಳಿದ್ದೇವೆ. ಆದರೆ ಉತ್ತರದ ಪ್ರತಿ ಬಂದಿದೆಯೆ ಹೊರತು, ಆ ಉತ್ತರದ ಪ್ರತಿಯಲ್ಲಿ ಉತ್ತರವೇ ಇಲ್ಲ. ನಾನು ಹೇಗೆ ಪ್ರಶ್ನೆಯನ್ನು ಮುಂದಕ್ಕೆ ಕೇಳುವುದು

ಎಂಬುದು ಗೊತ್ತಾಗುತ್ತಿಲ್ಲ.

ಶ್ರೀ ಎ.ಬಿ.ಪಾಟೀಲ್:- ಮಾನ್ಯ ಅಧ್ಯಕ್ಷರೆ, ಮೈಸೂರು ನಗರದ ಕೆ.ಆರ್.ಆಸ್ಪತ್ರೆಯ ಅಭಿವೃದ್ಧಿ ತುರ್ತಾಗಿ ಆಗಬೇಕಾದಂಥ ಕೆಲಸಗಳ ಬಗ್ಗೆ ಸರ್ಕಾರಕ್ಕೆ ಕೋರಿಕೆ ಬಂದಿದೆ. ಆದರೆ ಆ ಆಸ್ಪತ್ರೆಯಿಂದ ಯಾವ ಯಾವ ಕೆಲಸಗಳನ್ನು ಮಾಡಿಸಬೇಕು, ಯಾವ ಯಾವ ಉಪಕರಗಳನ್ನು ತರಿಸಿಕೊಡಬೇಕು ಎನ್ನುವಂಥ ಪಟ್ಟಿಯನ್ನು ಅವರು ಕೊಟ್ಟಿಲ್ಲ. ಆ ಒಂದು ದೃಷ್ಟಿಯಿಂದ ಸರ್ಕಾರದವರು, ಅಭಿವೃದ್ಧಿ ಕಾರ್ಯಗಳಿಗೆ ಕೂಡ ನಾವು ಪ್ರಯಾರಿಟಿ ಲಿಸ್ಟ್ ಬೇಸ್ ಮೇಲೆ ಈಗಾಗಲೇ ಹಣವನ್ನು ಬಿಡುಗಡೆ ಮಾಡಿದ್ದೇವೆ.

ಶ್ರೀ ಎ.ರಾಮದಾಸ್:- ಸನ್ಮಾನ್ಯ ಅಧ್ಯಕ್ಷರೆ, ತುರ್ತಾಗಿ ಹಣ ಎಷ್ಟು ಬೇಕೆಂದು ಅಲ್ಲಿಂದ ಎಷ್ಟು ಕೇಳಿದ್ದಾರೆ ಎನ್ನುವುದಕ್ಕೆ ಉತ್ತರವೆ ಇಲ್ಲದಿರುವುದಾಗ, ನೀವು ಕೊಟ್ಟಿರುವಂಥಹ ವಿಚಾರಗಳನ್ನು ಹೇಳಿದಿರಿ. ಈ ತುರ್ತು ಅಂದರೆ ನನಗೆ ಅರ್ಥವಾಗುತ್ತಿಲ್ಲ. ಈಗ ಆಸ್ಪತ್ರೆಯಿಂದ ಬಂದಿರುವುದು ಬೇಡಿಕೆಗಳು ಅವರ ಹತ್ತಿರ ಇಲ್ಲ ಎಂದರೆ ನನ್ನ ಹತ್ತಿರ ಇದೆ. ಇವತ್ತು ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ತುರ್ತಾಗಿ ಸರ್ಜಿಕಲ್ ವಾರ್ಡ್‌ನಲ್ಲಿ ಮತ್ತು ಓ.ಟಿ.ಥಿಯೇಟರ್‌ಗಳಲ್ಲಿ ನೀರು ಸುರಿಯುತ್ತಿದೆ. ಇದು ಹೊಸದಾಗಿ ಕಟ್ಟಿಸಿದ್ದು ಇದೆ. ನಾಲ್ಕು ಥಿಯೇಟರ್‌ಗಳಲ್ಲಿಯೂ ಸುರಿಯುತ್ತಿದೆ ಮಳೆಗಾಲದಲ್ಲಿ ಶಸ್ತ್ರಚಿಕಿತ್ಸೆ ಮಾಡುವುದಕ್ಕೆ ಆಗುವುದಿಲ್ಲ ಎಂದು ತಿಳಿಸಿದ್ದಾರೆ. ಅಂದರೆ ಮಳೆಗಾಲ ಬಂದಾಗ ಇನ್ನು ಮೇಲೆ ಆಪರೇಷನ್ ಮಾಡುವುದಕ್ಕೆ ಆಗುವುದಿಲ್ಲ ಎಂದು ಬೊರ್ಡ್ ಹಾಕಿಬಿಡೋಣವೆ? ಇದು ಮೊದಲನೆ ಪ್ರಶ್ನೆ. ಎರಡನೆಯ ಪ್ರಶ್ನೆಯೆಂದರೆ, ಔಷಧಿಯ ಉಗ್ರಾಣ ಏನು ಇದೆ, ಆ ಉಗ್ರಾಣ ವ್ಯವಸ್ಥಿತವಾಗಿಲ್ಲ ಅದಕ್ಕೋಸ್ಕರ ಹಣ ಕೊಡಿ ಎಂದು ಕೇಳಿದ್ದಾರೆ. ಮೂರನೆಯದಾಗಿ ಅಲ್ಲಿ ಇನ್ನೊಂದು ವಿಚಾರ ಬಂದಿದೆ. ಸುಮಾರು 750 ಹಾಸಿಗೆಗಳಿರುವಂಥ ಆಸ್ಪತ್ರೆಯಲ್ಲಿ ಕೇವಲ ಒಬ್ಬ ಎಲೆಕ್ಟ್ರಿಷಿಯನ್ ಕೂಡ ಇಲ್ಲ, ಜೊತೆಗೆ ವಿದ್ಯುತ್ ಉಪಕರಣಗಳು ಇಲ್ಲ ಎಂದು ಅದಕ್ಕೆ ಬೇಡಿಕೆಯನ್ನು ಕಳುಹಿಸಿದ್ದಾರೆ, ಅದರ ಬಗ್ಗೆಯೂ ಕೂಡ ಏನು ಉತ್ತರ ಇಲ್ಲ. ಆದರೆ ಆಶ್ಚರ್ಯವಾದಂಥದ್ದು ಎಂದರೆ ಸನ್ಮಾನ್ಯ ಅಧ್ಯಕ್ಷರೆ, ಒಂದಕ್ಕೆ ಉತ್ತರವನ್ನು ಕೊಟ್ಟಿದ್ದಾರೆ, 1,09,52,147 ರೂಪಾಯಿಗಳ ಆಧುನಿಕ ಉಪಕರಣಗಳನ್ನು ಒದಗಿಸಲಾಗಿದೆಯೆಂದು ಉತ್ತರವನ್ನು ಕೊಟ್ಟಿದ್ದಾರೆ. ಯಾವ ಆಧುನಿಕ ಉಪಕರಣಗಳು ಎಂದು ನಮಗೆ ಆಶ್ಚರ್ಯವಾಗುತ್ತದೆ. ಅವರು ಏನು ಕೇಳಿದ್ದಾರೆ ಅದನ್ನು ಬಿಟ್ಟುಬಿಟ್ಟು ಹತ್ತು ಏರ್‌ಕಂಡೀಷನರ್ ಕಳುಹಿಸಿಕೊಟ್ಟಿದ್ದಾರೆ, ಅದರಲ್ಲಿ ಎಂಟು ಕೆಟ್ಟುಹೋಗಿದ್ದಾವೆ. ಅದರೊಳಗೆ ಬರೀ ಕ್ಯಾಬಿನ್ ಮಾತ್ರ ಇದೆ ಇನ್‌ಸ್ಟ್ರುಮೆಂಟ್ಸ್ ಇಲ್ಲ. ಎರಡನೆಯದಾಗಿ ಎರಡು ಮಾರ್ಜರಿ ಕ್ಯಾಬಿನ್ ಕಳುಹಿಸಿಕೊಟ್ಟಿದ್ದಾರೆ. ಒಂದೊಂದಕ್ಕೆ ಐದೈದು ಲಕ್ಷವಾಗುತ್ತದೆ. ಹೆಣ ಇಡಲಿಕ್ಕೆ ಇದನ್ನು ಕಳುಹಿಸಿಕೊಟ್ಟಿದ್ದಾರೆ ಅಂದರೆ ಆಸ್ಪತ್ರೆಗೆ ಬಂದವರು ಹೆಣ ಇಡುವಂಥದ್ದಕ್ಕೆ ಮಾತ್ರ ಆ ಕ್ಯಾಬಿನ್ ಅವಶ್ಯಕತೆ ಇದೆಯೆಂಬುದು ಸರ್ಕಾರದ ಉದ್ದೇಶವಿದೆ. ಮೂರನೆಯದು, ಎರಡು ಎಕ್ಸರೆ ಮೊಬೈಲ್ ಕಳುಹಿಸಿಕೊಟ್ಟಿದ್ದಾರೆ. ಅದನ್ನು ಕಳುಹಿಸಿಕೊಟ್ಟು ಏಳು ತಿಂಗಳು ಆಗಿದೆ ಇದುವರೆಗೂ ಪ್ಯಾಕೆಟ್ ಬಿಚ್ಚಿಲ್ಲ. ಸರ್ಕಾರಕ್ಕೆ ಅಲ್ಲಿಂದ ಇದಕ್ಕಾಗಿ ಯಾವುದೇ ಮನವಿ ಕೂಡ ಬಂದಿರಲಿಲ್ಲ, ಇದನ್ನು ಸರ್ಕಾರದವರು ಕಳುಹಿಸಿಕೊಟ್ಟಿದ್ದಾರೆ. ಇದು ತುರ್ತಾದಂತಹ, ಅವಶ್ಯಕತೆ ಇರುವಂತ ವಿಚಾರವೆ? ಜೊತೆಗೆ ಒಂದೇ ಒಂದು ಉತ್ತರವನ್ನು ಹೇಳಿದ್ದಾರೆ ಸನ್ಮಾನ್ಯ ಅಧ್ಯಕ್ಷರೆ, ನಾನು ಒಂದು ಮಾತನ್ನು ಕೇಳುವುದಕ್ಕೆ ಇಚ್ಛಿಪಡುತ್ತೇನೆ, ಆಸ್ಪತ್ರೆಯ ಮೇಲಿರುವಂತ ದೂರುಗಳ ನಿವಾರಣೆಗೆ ಸರ್ಕಾರ

ಏನು ಕ್ರಮ ಕೈಗೊಂಡಿದೆ. ಇದಕ್ಕೆ ಯಾರಿಂದಲೂ ಕೂಡ ದೂರು ಬಂದಿಲ್ಲ ಆ ರೀತಿ ಏನಾದರು ದೂರು ಬಂದರೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಉತ್ತರವನ್ನು ಕೊಟ್ಟಿದ್ದಾರೆ. ದೂರು ಅಂದರೆ ಶಾಸಕನಾದವನೊಬ್ಬ ವಿಧಾನಸಭೆಯಲ್ಲಿ ಹೇಳಿದರೆ ಮಾತ್ರ ದೂರೆ? ಈಗಾಗಲೇ ಅಲ್ಲಿನ ಜನಸಾಮಾನ್ಯರು ಹೇಳಿದ್ದಾರೆ, ಕಳೆದ ಜೂನ್‌ನಲ್ಲಿ ಒಬ್ಬನಿಗೆ ಎಡಗಾಲು ಮುರಿದು ಹೋಗಿತ್ತು. ಅವನಿಗೆ ಎಡಗಾಲಿನ ಆಪರೇಷನ್‌ಗೆ ಎಂದು ಕರೆದುಕೊಂಡು ಹೋಗಿ ಬಲಗಾಲಿಗೆ ಬ್ಯಾಂಡೇಜ್ ಮಾಡಿ ಕಳುಹಿಸಿದ್ದಾರೆ. ಇದರ ಬಗ್ಗೆ ನಿಮಗೆ ದೂರು ಬಂದಿಲ್ಲವೆ?

ಅಧ್ಯಕ್ಷರು:- ನೀವು ಉಪಪ್ರಶ್ನೆ ಒಂದೋ ಎರಡೋ ಕೇಳಿದರೆ ಅದನ್ನು ನೆನಪಿನಲ್ಲಿಟ್ಟುಕೊಂಡು ಅದಕ್ಕೆ ಉತ್ತರವನ್ನು ಕೊಡುತ್ತಾರೆ. ನೀವು ಭಾಷಣ ಮಾಡುತ್ತಿದ್ದೀರಿ, ಅದನ್ನು ನೀವು ತಿಳಿದುಕೊಳ್ಳಬಹುದು ಎಂದು ನಾನು ಸುಮ್ಮನಿದ್ದೆ. ನೀವು ಉದ್ದಕ್ಕೂ ಭಾಷಣ ಮಾಡುತ್ತಾ ಹೋದರೆ ಅವರು ಪರಿಶೀಲನೆ ಮಾಡುತ್ತೇವೆ ಎಂದು ಹೇಳುತ್ತಾರೆ. ಮತ್ತೆ ಇನ್ನೊಂದು ಕಾಲಿಗೆ ಮತ್ತೊಂದು ಬ್ಯಾಂಡೇಜು ಹಾಕಿಸುತ್ತಾರೆ. ಇದು ಪ್ರಯೋಜನ ಆಗುವುದಿಲ್ಲ. ಇದು ಪ್ರಶ್ನೋತ್ತರ ಸಮಯ. ನೀವು ಸಂಕ್ಷಿಪ್ತವಾಗಿ ಸಪ್ಲಿಮೆಂಟರಿ ಕೇಳಬೇಕು ಅವರು ಅದಕ್ಕೆ ಉತ್ತರವನ್ನು ಕೊಡುತ್ತಾರೆ. ನೀವು ಎಲ್ಲವನ್ನು ಒಂದೇ ಸಾರಿ ಉಪನ್ಯಾಸ ಮಾಡಿದರೆ ಹೇಗೆ?

ಶ್ರೀ ಎ.ಬಿ.ಪಾಟೀಲ್:- ಈ ವರ್ಷ ಆಸ್ಪತ್ರೆಯವರು ಯಾವ ಉಪಕರಣಗಳು ಬೇಕೆಂಬ ಬಗ್ಗೆ ಪಟ್ಟಿಯನ್ನು ಕೊಟ್ಟಿಲ್ಲ. ಆದರೆ ಹೋದವರ್ಷ ಕೊಟ್ಟಂಥ ಈ ಪಟ್ಟಿಯ ಆಧಾರದ ಮೇಲೆ ಈಗಾಗಲೇ ಕೆ.ಆರ್.ಆಸ್ಪತ್ರೆಯಲ್ಲಿ ತುರ್ತಾಗಿ ಆಗಬೇಕಾದಂಥ ಕೆಲಸಗಳ ಬಗ್ಗೆ ಒಂದು ಪಟ್ಟಿಯನ್ನು ತಯಾರು ಮಾಡಿ ಹೊರ ರೋಗಿಗಳ ವಿಭಾಗದ ಕಟ್ಟಡದ ಕೆಲಸಕ್ಕಾಗಿ ಇವತ್ತು 1995-96ರ ಸಾಲಿಗೆ ಒಂದು ಲಕ್ಷ ರೂಪಾಯಿಗಳನ್ನು, ಸುಟ್ಟು ಗಾಯಗಳ ವಿಭಾಗದ ಕಟ್ಟಡದ ನಿರ್ಮಾಣಕ್ಕಾಗಿ 15 ಲಕ್ಷ ರೂಪಾಯಿಗಳನ್ನು, ಹಾಲಿ ಇರುವ ಶಸ್ತ್ರಚಿಕಿತ್ಸೆ ಕೊಠಡಿಯ ಹೆಚ್ಚುವರಿ ಸೌಲಭ್ಯಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು, ಕ್ಷ-ಕಿರಣ ಘಟಕಕ್ಕೆ ವಿಶೇಷ ವಿಭಾಗವನ್ನು ನಿರ್ಮಿಸುವ ಸಲುವಾಗಿ ಮೂರು ಲಕ್ಷದ ಐವತ್ತು ಸಾವಿರ ರೂಪಾಯಿಗಳನ್ನು, ಹೊರ ರೋಗಿಗಳ ವಿಭಾಗದ ಕಟ್ಟಡಕ್ಕಾಗಿ ಇಪ್ಪತ್ತು ಲಕ್ಷ ರೂಪಾಯಿಗಳನ್ನು, ಈ ರೀತಿ ನಾವು ಪ್ರಯಾರಿಟಿ ಲಿಸ್ಟ್ ಮಾಡಿ ಈ ಎಲ್ಲಾ ಒಟ್ಟು ಮೊತ್ತದ ಪೈಕಿ ಈಗಾಗಲೇ ನಾವು ಇದಕ್ಕೆ 28 ಲಕ್ಷ ಮೊತ್ತದ ವಿವಿಧ ಉಪಕರಣಗಳು. ಮತ್ತು ಪೀಠೋಪಕರಣಗಳಿಗಾಗಿ 1994-95ನೇ ಸಾಲಿನಲ್ಲಿ ಅವಕಾಶ ಮಾಡಲಾಗಿದೆ. ಈ ವರ್ಷವೂ ಕೂಡ ಅಂದರೆ 1995-96ನೇ ಸಾಲಿನ ಅವಧಿಯಲ್ಲಿ ಹೆಚ್ಚಿನದಾಗಿ ಹತ್ತು ಲಕ್ಷ ರೂಪಾಯಿಗಳನ್ನು ಇವತ್ತು ಬಿಡುಗಡೆ ಮಾಡುತ್ತೇವೆಂದು ತಮ್ಮ ಮುಖಾಂತರ ಹೇಳಬಯಸುತ್ತೇನೆ.

ಶ್ರೀ ಎ. ರಾಮದಾಸ್:- ಸನ್ಮಾನ್ಯ ಅಧ್ಯಕ್ಷರೆ, ನಾನು ಕೇಳುತ್ತಾ ಇರತಕ್ಕಂಥ ಪ್ರಶ್ನೆ ಏನೆಂದರೆ, ಓ.ಟಿ.ಥಿಯೇಟರ್ ಮಳೆಗಾಲದಲ್ಲಿ ಸುರಿಯುತ್ತಿದೆ ಅದರಿಂದ ಆ ಸಮಯದಲ್ಲಿ ಅಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ ಎಂದು ಕೇಳಲಾಗಿದೆ. ಅದರ ಬಗ್ಗೆ ಯಾವುದೇ ಹಣವನ್ನು ಮಂಜೂರು ಮಾಡಿಲ್ಲ. ಎರಡನೆಯದು, ಆಶ್ಚರ್ಯವೇನೆಂದರೆ, ಜುಲೈ 4ನೇ ತಾರೀಖು ಏನು ಹೊರರೋಗಿಗಳ ಕಟ್ಟಡವನ್ನು ಮಾನ್ಯ ಮುಖ್ಯಮಂತ್ರಿಗಳು ಉದ್ಘಾಟನೆ ಮಾಡುವ ಸಲುವಾಗಿ ಕಾರ್ಯಕ್ರಮವನ್ನು ಇಟ್ಟುಕೊಂಡಿದ್ದೀರಿ, ಆ ಕಟ್ಟಡದ ಕೆಲಸ ಸಂಪೂರ್ಣವಾಗಿ ಆಗಿಲ್ಲವೆಂದು

ಆ ಬಗ್ಗೆ ಪತ್ರವನ್ನು ಕೂಡ ತಮಗೆ ಕೊಟ್ಟಿದ್ದೇನೆ. ಆದರೂ ಅದನ್ನು ಉದ್ಘಾಟನೆಗಾಗಿ ಇಟ್ಟುಕೊಂಡಿದ್ದೀರಿ. ಆದರೆ 1995-96ನೇ ಸಾಲಿಗೆ ಇಪ್ಪತ್ತು ಲಕ್ಷ ರೂಪಾಯಿ ಮಂಜೂರು ಮಾಡಿದ್ದೀರಿ. ಕಟ್ಟಡವು ಸಂಪೂರ್ಣವಾಗಿ ಆಗದೇ ಇರುವಾಗ ಅದನ್ನು ಉದ್ಘಾಟನೆ ಮಾಡಿ ಇಡುವಂಥ ಪರಿಸ್ಥಿತಿ ಏಕೆ? ಮತ್ತೆ ಏತಕ್ಕಾಗಿ ಅದಕ್ಕೆ ಹಣವನ್ನು ಇಟ್ಟಿದ್ದೀರಿ?

ಶ್ರೀ ಎ.ಬಿ.ಪಾಟೀಲ್:- ಈ ಕೆ.ಆರ್.ಆಸ್ಪತ್ರೆಯ ಕಟ್ಟಡದ ಒಂದು ಇತಿಹಾಸವೆ ಬೇರೆ ಇದೆ. ಎಷ್ಟೋವರ್ಷಗಳಿಂದ ಟೆಂಡರ್ ಕ್ಯಾನ್ಸಲ್ ಆಗಿ ಹೊಸದಾಗಿ ಕಟ್ಟಡವನ್ನು ಕೂಡ ಇವತ್ತು ಕಟ್ಟಿದ್ದೇವೆ. ಮತ್ತು ಈಗಾಗಲೇ ಆ ಹೊಸ ಆಸ್ಪತ್ರೆಗೆ ಬೇಕಾದಂಥ ಎಲ್ಲಾ ಸಲಕರಣೆಗಳಿಗೆ ಮತ್ತು ಉಪಕರಣಗಳಿಗೆ ಹಾಗೂ ಪೀಠೋಪಕರಣಗಳಿಗೆ ಹಾಗೆಯೆ ಲಿಫ್ಟ್ ಗಳಿಗೂ ಕೂಡ ಇವತ್ತು ಆರ್ಡರ್ ಕೊಟ್ಟಿದ್ದೇವೆ. ಅವು ಆದಷ್ಟು ತೀವ್ರಗತಿಯಲ್ಲಿ ಬರುತ್ತಾ ಇದ್ದಾವೆ. ನಮ್ಮ ಇಲಾಖೆಗೆ ಪಿ.ಡಬ್ಲ್ಯೂ.ಡಿ.ಯವರು ಆ ಕಟ್ಟಡದ ಪತ್ರವಾಗಲಿ, ಪೊಜಿಷನ್ ಆಗಲಿ ಕೊಟ್ಟಿಲ್ಲ. ಆದನ್ನು ನಾವು ತೀವ್ರಗತಿಯಿಂದ ಪರಿಶೀಲನೆ ಮಾಡಿ ಆದಷ್ಟು ಬೇಗನೆ ಈ ಎಲ್ಲಾ ಕೆಲಸಗಳನ್ನು ಮುಗಿಸುತ್ತೇವೆ ಎಂದು ತಮ್ಮ ಮುಖಾಂತರ ಹೇಳಬಯಸುತ್ತೇನೆ.

ಶ್ರೀ ಎ.ರಾಮದಾಸ್:- ಕಟ್ಟಡದ ಕೆಲಸ ಸಂಪೂರ್ಣವಾಗಿ ಮುಗಿದ ನಂತರವೇ ಉದ್ಘಾಟನೆಯ ಕಾರ್ಯಕ್ರಮವನ್ನು ಇಟ್ಟುಕೊಳ್ಳುತ್ತೀರಾ ಅಥವಾ ಈಗಿನ ಕಾರ್ಯಕ್ರಮದ ಪ್ರಕಾರವೇ ನಡೆಯುತ್ತಿದೆಯೋ?

ಅಧ್ಯಕ್ಷರು:- ಇನ್ನು ಮುಂದಕ್ಕೆ ಕೆಲಸ ಸಂಪೂರ್ಣವಾದ ಮೇಲೆ ಉದ್ಘಾಟನೆಯನ್ನು ಮಾಡಿ.

ಶ್ರೀ ಎ.ರಾಮದಾಸ್:- ಇಲ್ಲ ಸನ್ಮಾನ್ಯ ಅಧ್ಯಕ್ಷರೆ, ನಾನು ಏಕೆ ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ, ನಾಲ್ಕು ದಿವಸದ ಹಿಂದೆ ಪಿ.ಡಬ್ಲ್ಯೂ.ಡಿ. ಇಲಾಖೆಯವರು ಈ ಕಟ್ಟಡದ ಕೆಲಸ ಸಂಪೂರ್ಣವಾಗಿ ಮುಗಿದಿದೆ ಈ ಕಟ್ಟಡವನ್ನು ತಮ್ಮ ವತಕ್ಕೆ ಕೊಡುತ್ತಿದ್ದೇವೆ ಎಂದು ಸರ್ಟಿಫಿಕೇಟನ್ನು ಆಸ್ಪತ್ರೆಗೆ ಕೊಟ್ಟುಬಿಟ್ಟಿದ್ದಾರೆ. ಇವರು ವರ್ಗಾವಣೆ ಮಾಡಿಕೊಂಡು ಆಗಿದೆ. ಈಗ ಈ ತಿಂಗಳು ಇಪ್ಪತ್ತು ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದಾರೆ ಆದರ ಬಗ್ಗೆ ನಾನು ಕೇಳುತ್ತಿದ್ದೇನೆ.

11.20 ಎ.ಎಂ.

ಶ್ರೀ ಎ.ಬಿ.ಪಾಟೀಲ್:- ಆದು ಗೊತ್ತಾದಾಗ ನಾನು ಕೆ.ಆರ್.ಆಸ್ಪತ್ರೆಗೆ ಹೋಗಿ ಬಂದಿದ್ದೇನೆ. ಎಲೆಕ್ಟ್ರಿಫಿಕೇಶನ್, ಜನರೇಟರ್ಸ್ ಮತ್ತು ಲಿಫ್ಟ್‌ಗಳನ್ನು ಇವೊತ್ತಿಗೂ ಕೂಡ ಲೋಕೋಪಯೋಗಿ ಇಲಾಖೆಯವರು ಸರಿಯಾಗಿ ಸಪ್ಲೈ ಮಾಡಿಲ್ಲ. ಆ ಒಂದು ದೃಷ್ಟಿಯಿಂದ ಬೇಗನೆ ಕಳಿಸಿಕೊಡಬೇಕೆಂದು ಲೋಕೋಪಯೋಗಿ ಇಲಾಖೆಯವರೊಂದಿಗೆ ಮಾತನಾಡಿದ್ದೇನೆ. ಅವು ಬಂದ ತಕ್ಷಣ ನಾವು ಅಲ್ಲಿ ಆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ಶ್ರೀ ವಾಟಾಳ್ ನಾಗರಾಜ್:- ಅವರು ಪ್ರಶ್ನೆಗಳನ್ನು ಕೇಳಿದರು. ಅದರಲ್ಲಿ ಒಂದು ಬಹಳ ಮುಖ್ಯವಾದಂಥದ್ದು ಏನೆಂದರೆ, ಎಡಗಾಲಿಗೆ ನೋವಾಗಿದ್ದರೆ ಬಲಗಾಲಿಗೆ ಬ್ಯಾಂಡೇಜನ್ನು ಕಟ್ಟುತ್ತಾರೆ ಕೆ.ಆರ್.ಆಸ್ಪತ್ರೆಯಲ್ಲಿ ಎಂದು ಹೇಳಿದರು. ಈ ಪರಿಸ್ಥಿತಿ ಕೆ.ಆರ್.ಆಸ್ಪತ್ರೆನಲ್ಲಿ ಆಷ್ಟೇ ಅಲ್ಲ, ಕೆ.ಆರ್‌ನಲ್ಲೂ ಉಂಟು, ವಿಕ್ಟೋರಿಯಾನಲ್ಲೂ ಉಂಟು. ಬೌರಿಂಗ್‌ನಲ್ಲೂ ಉಂಟು. ಇದನ್ನು ಸರಿಪಡಿಸತಕ್ಕಂಥ ವ್ಯವಸ್ಥೆ ಮಾಡಬೇಕು. ತಮಗೆ ಗೊತ್ತಿರಬೇಕು, ತಾವು ಮೊನ್ನೆ ತಮ್ಮ ಕ್ಷೇತ್ರದವರನ್ನು ನೋಡಲಿಕ್ಕೆ ಅಲ್ಲಿ ಹೋಗಿದ್ದಿರಿ ಎಂದು ಕಾಣಿಸುತ್ತದೆ. ಪರಿಸ್ಥಿತಿ ಎಷ್ಟು

ಹದಗೆಟ್ಟಿದೆ ಎಂದರೆ, ಇಲ್ಲಿ ಅದರ ಬಗ್ಗೆ ಸಮಗ್ರವಾಗಿ ಚರ್ಚೆ ಆಗಬೇಕು. ತಾವು ದಯಮಾಡಿ ಆರೋಗ್ಯ ಇಲಾಖೆಯ ಬಗ್ಗೆ ಚರ್ಚೆ ಮಾಡಲು ಸ್ವಲ್ಪ ಅವಕಾಶವನ್ನು ಮಾಡಿಕೊಟ್ಟರೆ ಚೆನ್ನಾಗಿರುತ್ತದೆ. ಏಕೆಂದರೆ ತಾವು ಪ್ರತಿಯೊಂದು ವಾರ್ಡ್‌ಗಳನ್ನು ನೋಡಬೇಕು, ಹಾಸಿಗೆಗಳನ್ನು ನೋಡಬೇಕು, ಸ್ವಾತಂತ್ರ್ಯಕ್ಕಿಂತ ಪೂರ್ವಹೇಗಿತ್ತೋ, ಆ ಹಾಸಿಗೆಗಳು, ಆ ಜಿರಲೆ, ಆ ಇಲಿ, ಆ ಸೊಳ್ಳೆ, ಆ ತಿಗಣೆ ಅದರ ಮೇಲೆ ರೋಗಿ ಮಲಗತಕ್ಕಂಥದ್ದು, ಇನ್ನು ಕಾಯಿಲೆ ಹೇಗೆ ವಾಸಿಯಾಗುತ್ತದೆ ಎಂದು ಹೇಳಿದರೆ ಹೇಗೆ ಆಗುತ್ತದೆ. ಕರೆಂಟ್ ಹೋದರೆ ಜನರೇಟರ್ ಇಲ್ಲ. ಆಪರೇಶನ್ ಥಿಯೇಟರ್‌ನಲ್ಲಿ ಸರಿಯಾದ ವ್ಯವಸ್ಥೆ ಇಲ್ಲ. ದೇಹದೊಳಗೆ ಕತ್ತರಿ ಬಿಟ್ಟುಬಿಡುತ್ತಾರೆ. ಅಂಥದ್ದೆಲ್ಲಾ ತಾವು ನೋಡುತ್ತಿದ್ದೀರಿ.

ಅಧ್ಯಕ್ಷರು:- ಇದೆಲ್ಲಾ ಸುಧಾರಿಸಬೇಕಾದರೆ ನಿಮ್ಮ ಸರ್ಕಾರ ಬರಬೇಕು ವಾಟಾಳರೇ.

ಶ್ರೀ ವಾಟಾಳ್ ನಾಗರಾಜ್:- ನಮ್ಮ ಸರ್ಕಾರ ಬಂದರೆ ಆಪರೇಶನ್ ಎಷ್ಟು ಚೆನ್ನಾಗಿ ಮಾಡುತ್ತೇವೆ ನೋಡಿ ನೀವು.

ಶ್ರೀ ಎಲ್.ಆರ್.ಶಿವರಾಮೇಗೌಡ:- ವಾಟಾಳರ ಸರ್ಕಾರ ಬರುವ ಹಾಗಿಲ್ಲ ಅದು ಆಗುವ ಹಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್:- ಸನ್ಮಾನ್ಯ ಅಧ್ಯಕ್ಷರೇ, ದಯಮಾಡಿ ಇದು ಹಕ್ಕುಚ್ಯುತಿ ಆಗುತ್ತದೆ. ಶಿವರಾಮೇಗೌಡರು ವಾಟಾಳರ ಸರ್ಕಾರ ಬರುವುದಿಲ್ಲ ಎಂದು ಹೇಳಿದ್ದಾರೆ. ಕಾರಣ ಏನು ? ನಿನ್ನೆ ನನ್ನ ಹತ್ತಿರ ಬಂದು ನಿಮ್ಮ ಸರ್ಕಾರಕ್ಕೆ ನಾನು ಬೆಂಬಲ ಕೊಡುತ್ತೇನೆ. ನಾನು ನಿಮ್ಮ ಜೊತೆ ಸೇರುತ್ತೇನೆ ಎಂದು ಹೇಳಿ ಇವೊತ್ತು ಸತ್ಯಕ್ಕೆ ದೂರವಾದ ಮಾತನ್ನು ಆಡಿದ್ದಾರೆ, ತಾವು ಇದರ ಬಗ್ಗೆ ತೀರ್ಪು ಕೊಡಬೇಕಾಗುತ್ತದೆ. ಅದು ನಿಮಗೆ ಬಿಟ್ಟ ವಿಷಯ.

ಅಧ್ಯಕ್ಷರು:- ನಾನು ಪರಿಶೀಲನೆ ಮಾಡುತ್ತೇನೆ. ಕರ್ಕಿಯವರೇ ತಮ್ಮ ಪ್ರಶ್ನೆಗೆ ಮಂತ್ರಿಗಳು ಕಾಲಾವಕಾಶವನ್ನು ಕೇಳಿದ್ದಾರೆ.

ಡಾ:ಎಂ.ಪಿ.ಕರ್ಕಿ:- ಮಾನ್ಯ ಅಧ್ಯಕ್ಷರೇ, ನಾನು ಅನೇಕ ಪ್ರಶ್ನೆಗಳನ್ನು ಕೇಳಿದ್ದೇನೆ. ಎಲ್ಲಾ ಚುಕ್ಕೆ ಗುರುತಿನ ಪ್ರಶ್ನೆಗೆ ಉತ್ತರ ಬಂದಿದೆ. ನನ್ನ ಪ್ರಶ್ನೆಗೆ ಈ ಸದನದಲ್ಲಿ ಯಾವುದಕ್ಕೂ ಉತ್ತರ ಬಂದಿಲ್ಲ. ಇದು ಬಹಳ ಗಹನವಾದಂಥ ಪ್ರಶ್ನೆ ಏನೂ ಅಲ್ಲ. ಇದು ರೆಕಾರ್ಡ್‌ನಲ್ಲಿ ಇರತಕ್ಕಂಥ ಪ್ರಶ್ನೆ, ಇದಕ್ಕೆ ಏತಕ್ಕೆ ಸಮಯ ಕೇಳಿದ್ದಾರೋ ಗೊತ್ತಿಲ್ಲ. ಹೀಗೆ ಅನೇಕ ಪ್ರಶ್ನೆಗಳು.....

ಅಧ್ಯಕ್ಷರು:- ನಿಮ್ಮ ಬೇಸರ ನನಗೆ ಅರ್ಥವಾಗಿದೆ. ದಯಮಾಡಿ ಈ ಸಲ ಸಮಯ ಕೊಡೋಣ. ಮತ್ತೊಮ್ಮೆ ನಾನು ಈ ಪ್ರಶ್ನೆ ಪ್ರಿಂಟ್ ಮಾಡಿಸುತ್ತೇನೆ.

ಡಾ|| ಎಂ.ಪಿ.ಕರ್ಕಿ:- ಆಯಿತು. ಆದರೆ ಅದು ಮತ್ತೇ ಚುಕ್ಕೆ ಗುರುತಿನ ಪ್ರಶ್ನೆಯಾಗಿ ಬರಬೇಕು.

ಅಧ್ಯಕ್ಷರು:- ಆಯಿತು ಬರುತ್ತದೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ:- ನಾನು ಆರೋಗ್ಯ ಸಚಿವರಿಗೆ 1941ನೇ ಪ್ರಶ್ನೆಯನ್ನು ಕೇಳುತ್ತೇನೆ.

ಡಾ|| ಹೆಚ್.ಸಿ.ಮಹಾದೇವಪ್ಪ:- ಸನ್ಮಾನ್ಯ ಅಧ್ಯಕ್ಷರೇ ಉತ್ತರವನ್ನು ಸ್ವಲ್ಪ ತಡವಾಗಿ ಸದನಕ್ಕೆ ಒದಗಿಸಲಾಗಿದೆ. ಆದಕಾರಣ ತಾವು ಅನುಮತಿ ಕೊಟ್ಟರೆ ಉತ್ತರ ಈಗ ಕೊಡುತ್ತೇವೆ.

ಅಧ್ಯಕ್ಷರು:- ಇವೊತ್ತಿಗೆ ಅವಕಾಶ ಕೊಡುತ್ತೇನೆ.

ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ:- ನನಗೆ ಉತ್ತರ ಬಂದಿಲ್ಲ. ಅದು ಏನೆಂದು ನೀವೇ ಹೇಳಬೇಕು. ಅದು ಏನು ಉತ್ತರ ಹೇಳುತ್ತೀರೋ ಹೇಳಿ. ಆಮೇಲೆ ಕೇಳುತ್ತೇನೆ. ಅದು ನೋಡಿದ ಮೇಲೆ ಕೇಳುತ್ತೇನೆ.

ಡಾ॥ ಹೆಚ್.ಸಿ.ಮಹಾದೇವಪ್ಪ:- ಸನ್ಮಾನ್ಯ ಅಧ್ಯಕ್ಷರೆ, ಬೆಳಗ್ಗೆ ಸದನಕ್ಕೆ ಉತ್ತರ ಕೊಡಿಸಲಾಗಿದೆ. ನಾಲ್ಕು ಗಂಟೆಗೆ ತಾವು ಕೊಡಬೇಕೆಂದು ಹೇಳಿದ್ದರಿಂದ ಮಾನ್ಯ ಸದಸ್ಯರಿಗೆ ತಲುಪಿಸಲಾಗಲಿಲ್ಲ.

ವಿಷಯ:- ಬೀದರ್ ಜಿಲ್ಲೆಯಲ್ಲಿ ಇತ್ತೀಚೆಗೆ ಕಾಲರಾ ಹರಡಿದ ಹಿನ್ನೆಲೆಯಲ್ಲಿ ಕಾಲರಾ ನಿರೋಧಕ ಔಷಧಿಗಳನ್ನು ಖರೀದಿಸುವಲ್ಲಿ ನಡೆದಿದೆ ಎನ್ನಲಾದ ಅವ್ಯವಹಾರದ ಬಗ್ಗೆ.

ಚುಕ್ಕೆ ಗುರ್ತಿನ ಪ್ರಶ್ನೆ ಸಂಖ್ಯೆ :240(1941)

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಔರಾದ್):- ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ)ಬೀದರ್ ಜಿಲ್ಲೆಯ ಬಹುತೇಕ ಸ್ಥಳಗಳಲ್ಲಿ ಇತ್ತೀಚೆಗೆ ಕಾಲರಾ ಉಂಟಾಗಿದ್ದುದು. ನಿಜವಲ್ಲವೇ?

ಆ)ಕಾಲರಾ ನಿರೋಧಕ ಔಷಧಿಗಳನ್ನು ಈ ಸಂಬಂಧವಾಗಿ ಸ್ಥಳೀಯವಾಗಿ ಖರೀದಿ ಮಾಡಿದುದು ನಿಜವಲ್ಲವೇ?

ಇ)ಹಾಗಿದ್ದಲ್ಲಿ ಎಷ್ಟು ಮೊತ್ತದ ಔಷಧಿಗಳನ್ನು ಸ್ಥಳೀಯವಾಗಿ ಖರೀದಿ ಮಾಡಲಾಗಿತ್ತು?

ಈ)ಸ್ಥಳೀಯವಾಗಿ ಔಷಧಿಗಳನ್ನು ಕೊಂಡುಕೊಳ್ಳಲು 'ಡ್ರಗ್ ಕೌನ್ಸಿಲ್'ಅನುಮತಿ ನೀಡಿದೆಯೇ?

ಉ)ಔಷಧಿಗಳನ್ನು ಯಾವ ಯಾವ ಸಂಸ್ಥೆಗಳಿಂದ ಕೊಳ್ಳಲಾಯಿತು. ಔಷಧಿಗಳನ್ನು ಕೊಳ್ಳುವ ಮುನ್ನ ನಿಯಮಾನುಸಾರ ಕೊಟೇಷನ್‌ಗಳನ್ನು ಕರೆಯಲಾಗಿತ್ತೇ?

ಊ)ಔಷಧಿ ನಿಯಂತ್ರಣ ಪರಿಷತ್ತಿನಿಂದ ಅನುಮತಿ ಪಡೆಯದೇ ಔಷಧಿಗಳನ್ನು ಖರೀದಿ ಮಾಡಿರುವ ಹಿನ್ನೆಲೆಯಲ್ಲಿ ತನಿಖೆ ನಡೆಸಲಾಗುತ್ತದೆಯೇ?

ಋ)ಹಾಗಿದ್ದಲ್ಲಿ ಇದುವರೆಗೆ ಎಷ್ಟು ಜನ ಅಧಿಕಾರಿಗಳ ಮೇಲೆ ಶಿಸ್ತಿನ ಕ್ರಮ ಕೈಗೊಳ್ಳಲಾಗಿದೆ?

ಋು)ಈ ಔಷಧಿಗಳ ಖರೀದಿಯ ಹಿನ್ನೆಲೆಯಲ್ಲಿ ಅವ್ಯವಹಾರ ನಡೆದಿದೆ ಎನ್ನಲಾಗಿದ್ದು ನಿಜವೇ? ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಸಿ.ಮಹದೇವಪ್ಪ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು):-

ಅ)ನಿಜ. 17 ಜನರಿಗೆ ಕಾಲರಾ ಎಂದು ಗುರುತಿಸಲಾಗಿ ಜಿಲ್ಲೆಯಲ್ಲಿ ಒಟ್ಟು 1- 1- 95ರಿಂದ 31- 8- 95ರವರೆಗೆ 1477 ಕರುಳುಬೇನೆ ಪ್ರಕರಣಗಳು ವರದಿಯಾಗಿ 34 ಮರಣ ಸಂಭವಿಸಿರುತ್ತದೆ. ಅದರಲ್ಲಿ ಜುಲೈ ಮತ್ತು ಆಗಸ್ಟ್ 95ರಲ್ಲಿ ಒಟ್ಟು 1146 ಪ್ರಕರಣ ವರದಿಯಾಗಿದ್ದು 30 ಮರಣ ಹೊಂದಿರುತ್ತದೆ. ಕಾಲರಾದಿಂದ ಮರಣ ಸಂಭವಿಸಿರುವುದಿಲ್ಲ.